**ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ**

ಸರ್ಕಾರದ ನಿರ್ದೇಶನದಂತೆ 2018ನೇ ಸಾಲಿನ 2ನೇ ಪಿಯುಸಿ ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅರ್ಹತೆಯನ್ನು ಪಡೆದು ಸಿಇಟಿ–2018ಕ್ಕೆ ಹಾಜರಾಗಿರುವ ಅಭ್ಯರ್ಥಿಗಳಿಗೆ ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯುವ ಇಂಜಿನಿಯರಿಂಗ್ ಸೀಟುಗಳನ್ನು ಹಂಚಿಕೆ ಮಾಡಲಾಗುವುದು.

2018ನೇ ಸಾಲಿನ 2ನೇ ಪಿಯುಸಿ ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳ ಅಂಕಗಳನ್ನು ನೇರವಾಗಿ ಇಲಾಖೆಯಿಂದ ಪಡೆಯಲಾಗುವುದು. ಇತರೆ ಬೋರ್ಡ್‌ಗಳಿಂದ (CBSE, CISCE, 10+2) 2018ನೇ ಸಾಲಿನಲ್ಲಿ 12ನೇ ತರಗತಿಯನ್ನು ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿಗಳನ್ನು ಸಿಇಟಿ–2018ನೇ ಸಾಲಿನ ಪ್ರವೇಶ ಪತ್ರದೊಂದಿಗೆ ಪ್ರಾಧಿಕಾರಕ್ಕೆ ದಿನಾಂಕ 01–08–2018 ಮ.1.00 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.

ಅಭ್ಯರ್ಥಿಗಳು ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಅನುಬಂಧ 'ಎ' ನಲ್ಲಿ ನೀಡಲಾಗಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ಮೂಲ ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕು.

ನೋಡಲ್ ಕೇಂದ್ರಗಳಿಗೆ ಬರುವುದಕ್ಕೆ ಮೊದಲು, ರ್‍ಯಾಂಕ್ ಗಳಿಸಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳು, ಎಲ್ಲಾ ದಾಖಲೆಗಳ ಮೂಲ ದಾಖಲೆಗಳನ್ನು ಮತ್ತು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ತಮ್ಮ ಬಳಿ ಹೊಂದಿರುತ್ತೇವೆ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.

- ✓ ದಾಖಲೆಗಳ ಪರಿಶೀಲನೆಯ ನಂತರ ಅರ್ಹರಾಗುವಂತಹ ವಿದ್ಯಾರ್ಥಿಗಳನ್ನು ಮಾತ್ರ, ಅವರು ತಮ್ಮ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಪರಿಗಣಿಸಲಾಗುವುದು.
- ✓ ವಿದ್ಯಾರ್ಥಿಗಳು, ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಈ ಕೆಳಗೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ನೋಡಲ್ ಕೇಂದ್ರದಲ್ಲಿ ಖುದ್ದಾಗಿ ಹಾಜರಿರಬೇಕು.

**ಸೂಚನೆ:** ದಾಖಲೆಗಳನ್ನು ಪರಿಶೀಲಿಸಿ, ಪರಿಶೀಲನಾ ಚೀಟಿಯನ್ನು ವಿದ್ಯಾರ್ಥಿಗೆ ಒಮ್ಮೆ ನೀಡಿದ ನಂತರ, ಯಾವುದೇ ಕಾರಣಕ್ಕೂ ಯಾವುದೇ ಬದಲಾವಣೆಗಳನ್ನು ಮಾಡುವುದಕ್ಕೆ / ಕ್ಲೇಮುಗಳನ್ನು ಕೋರುವುದಕ್ಕೆ ಅನುಮತಿ ನೀಡುವುದಿಲ್ಲ. ವಿದ್ಯಾರ್ಥಿಗಳು ದಾಖಲೆ ಪರಿಶೀಲನಾ ಕೌಂಟರ್ ಅನ್ನು ಬಿಟ್ಟುಹೋಗುವುದಕ್ಕೆ ಮೊದಲು, ಪರಿಶೀಲನಾ ಚೀಟಿಯಲ್ಲಿ ಮತ್ತು ಸ್ವೀಕೃತಿ ಚೀಟಿಯಲ್ಲಿ ಮುದ್ರಿತವಾಗಿರುವ ನಮೂದುಗಳನ್ನು ಪರಿಶೀಲಿಸಿಕೊಳ್ಳುವಂತೆ ಸೂಚಿಸಲಾಗಿದೆ. ಯಾವುದೇ ತಪ್ಪು/ದೋಷ ಉಂಟಾಗಿದ್ದ ಪಕ್ಷದಲ್ಲಿ, ಅದನ್ನು ಸರಿಪಡಿಸುವಂತೆ ಪರಿಶೀಲನಾಧಿಕಾರಿಗೆ ತಿಳಿಸಬೇಕು. ಪರಿಶೀಲನೆಯ ನಂತರ ಅರ್ಹರಾದ ವಿದ್ಯಾರ್ಥಿಗಳಿಗೆ ಮಾತ್ರ ತಮ್ಮ ಇಚ್ಛೆ (option) ಗಳನ್ನು ನಮೂದಿಸುವುದಕ್ಕೆ ಮತ್ತು ಸೀಟುಗಳನ್ನು ಹಂಚಿಕೆ ಮಾಡುವುದಕ್ಕೆ ಪರಿಗಣಿಸಲಾಗುವುದು. ಪರಿಶೀಲನಾ ಚೀಟಿಯ ಮೇಲೆ ಮುದ್ರಿತವಾಗಿರುವ ಎಲ್ಲಾ ವಿವರಗಳನ್ನು, ಸೀಟುಗಳ ಹಂಚಿಕೆಗೆ ಸಂಬಂಧಿಸಿದಂತೆ ಪರಿಗಣಿಸಲಾಗುವುದು. ಸೀಟು ಹಂಚಿಕೆ ಪರಿಗಣನೆಗೆ ಒಬ್ಬ ವಿದ್ಯಾರ್ಥಿ ಹೊಂದಿರಬೇಕಾದ ಅರ್ಹತೆಯನ್ನು ಸಂಪೂರ್ಣವಾಗಿ, ಆ ವಿದ್ಯಾರ್ಥಿ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಎಲ್ಲಾ ಪೂರಕ ದಾಖಲೆಗಳನ್ನು ಸಲ್ಲಿಸುವುದು ಮತ್ತು ಅವು ಆ ವಿದ್ಯಾರ್ಥಿ ಆನ್‌ಲೈನ್ ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಯ ಸರಿತನಕ್ಕೆ ಅನುಗುಣವಾಗಿ ಇರುವುದನ್ನು ಅವಲಂಬಿಸಿರುತ್ತದೆ. ಆದ್ದರಿಂದ, ಮಾಹಿತಿಯ ಸರಿತನವನ್ನು ಖಚಿತಪಡಿಸುವುದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಸಹ ಜಂಟಿಯಾಗಿ ಹೊಣೆಗಾರನಾಗಿರುತ್ತಾನೆ. ಆದ್ದರಿಂದ ಯಾವುದೇ ಸಮಯದಲ್ಲಿಯೂ, ಮಾಹಿತಿಯನ್ನು ಮಾರ್ಪಾಟು ಮಾಡುವುದಕ್ಕೆ ಸಂಬಂಧಿಸಿದ ಮನವಿಯನ್ನು ಎಂಥಹುದೇ ಪರಿಸ್ಥಿತಿಗಳಲ್ಲಿ ಸಹ ಪರಿಗಣಿಸಲಾಗುವುದಿಲ್ಲ.

ಪೂರಕ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ದಾಖಲಾತಿ ಪರಿಶೀಲನೆ ಮತ್ತು ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

| Sl. No. | Particulars | Date | Timings | |
|---|---|---|---|---|
| | | | 9.00 am to 12.30 pm Rank Ranges | 1.00 pm to 4.00 pm Rank Ranges |
| 01 | Verification of documents in all the 16 Helpline Centres. Candidates can attend document verification in any helpline centre. (Helpline centres hosted on KEA Website) | 01-08-2018 | 200001 to 204000 | 204001 to 208000 |
| | | 02-08-2018 | 208001 to 213136 | - |
| 02 | Option Entry by eligible candidates | From 1.00 pm on 04-08-2018 to 06-08-2018 up to 6.00 pm | | |
| 03 | Announcement of Seat Allotment Results | 08-08-2018 after 6.00 pm | | |
| 04 | Payment of fee, downloading of admission order. | 09-08-2018 to 10-08-2018 (During Banking Hours) | | |
| 05 | Last date and time to report to the colleges along with the Admission Order and Original Documents | 10-08-2018 before 5.30 pm | | |

ಸೂಚನೆ: ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯುವ ಇಂಜಿನಿಯರಿಂಗ್ ಸೀಟುಗಳನ್ನು ಮಾತ್ರ ಪೂರಕ ಪರೀಕ್ಷೆಯಲ್ಲಿ ಅರ್ಹತೆ ಪಡೆದವರಿಗೆ ಮೆರಿಟ್ ಹಾಗು ಇಚ್ಛೆ / ಆಯ್ಕೆ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುವುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ದಿನಾಂಕ: 30–07–2018
ಬೆಂಗಳೂರು.

Website: http://kea.kar.nic.in
Email: keauthority-ka@nic.in